(SRI B. N. BORANNA GOWDA.)

(*a*) the number of bridges, high level causeways and construction in Hassan District;

(*b*) the amount sanctioned for these bridges and causeways;

(*c*) the bridges and causeways completed up to the end of August 1954;

(*d*) whether there are any bridges and causeways for which the estimates have been prepared and if so, how many?

A.—Sri Kadidal MANJAPPA (Minister for Revenue and Public Works).—

(*a*) Six bridges and two causeways.

(*b*) The amount of the estimate sanctioned for these bridges and causeways are as follows:—

1. Constructing a bridge across Benaganahalli Rs. 32,660.
2. Constructing a bridge across Yagachi river near Bannur Rs. 52,300.
3. Constructing a bridge across Kyathehole near Hosur Rs. 24,750.
4. Constructing a bridge across Bindigehalla near Arakere Rs. 20,700.
5. Constructing a bridge across Kagehalla Rs. 20,280.
6. Constructing a bridge across Vothehole near Belur Rs. 19,000.

Causeways :—

1. H.L.C. across Gulgalehalla Rs. 16,000.
2. H.C.C. across Yegachi river near Kundlur Anicut Rs. 33,000.

(*c*) Six bridges and one causeway have been completed.

(*d*) Yes, seven estimates for construction of bridges have been prepared.

Sri B. N. BORANNA GOWDA.—May I know when the estimate for constructing the bridge across Benaganahalli was first prepared, Sir?

Sri Kadidal MANJAPPA.—I cannot tell you.

Sri B. N. BORANNA GOWDA.—May I know the date of sanction?

Sri Kadidal MANJAPPA.—I am sorry; if the Hon'ble Member had put the question, I would have been able to give the information.

Sri B. N. BORANNA GOWDA.—Regarding constructing the bridge across Kagehalla I want to know when the estimate was prepared and when it was sanctioned, Sir?

Sri Kadidal MANJAPPA.—The estimate was sanctioned in the year 1953-54.

Sri B. N. BORANNA GOWDA.—May I know the date of sanction of the first estimate for the construction of a bridge across Benaganahalli?

Sri Kadidal MANJAPPA.—The information is not readily available. Perhaps it is sanctioned in the year 1953-54.

Sri B. N. BORANNA GOWDA.—All these six bridges you are constructing out of State funds?

Sri Kadidal MANJAPPA.—That I cannot tell you definitely. Some of them get contribution from the District Boards.

Sri B. N. BORANNA GOWDA.—Regarding item No. 7, are the Government going to take up the work?

Sri Kadidal MANJAPPA.—As early as possible. As soon as the estimates are sanctioned, the work will be taken up.

S. No. 83 of Haliyur village, Chitaldrug Taluk (Sale of 6 acres in Auction).

Q.—69. Sri T. HANUMIAH (Hiriyur—Scheduled Castes).—

Will the Government be pleased to state:—

(*a*) when the public auction took place of about six acres of land in Survey No. 83 of Haliyur village in Chitaldrug Taluk;

(*b*) when the land was confirmed to the purchaser in the public auction (the Government order and date may kindly be stated);

(*c*) what objections were put forth before the Revenue Commissioner in Mysore, Bangalore, by the appellants and the orders passed by the Revenue Commissioner thereon;

(*d*) whether there are any appeals filed before the Revenue Minister regarding the disposal of land in Survey No. 83 of Haliyur village referred to above;

(*e*) what orders have been passed against the said appeals if any and the number of the Government order and date may kindly be stated;

(*f*) the extents of land that the appellants possess;

(*g*) what the highest bid that was got in the public auction is; in what year the same was confirmed; who is held responsible for the loss of interest, etc., sustained by the auction-purchaser between the date of auction and the date of confirmation?

A.—Sri Kadidal MANJAPPA (Minister for Revenue and Public Works).—

(*a*) 2nd April 1949.

(*b*) The sale was not confirmed.

(*c*) For objections please see Appendix below. The Revenue Commissioner dismissed the appeal and directed that the sale already held in respect of the respondent be confirmed.

(*d*) Yes.

(*e*) The sale is set aside and two acres of land adjacent to the appellants' lands are ordered to be granted to them and the remaining four acres to the respondent, upset price being fixed at Rs. 175 per acre. Government Order No. R. 6939-40—L.R. 68-51-8, dated 20th August 1954.

(*f*) Information not available.

(*g*) Rs. 985. Sale was not confirmed; The confirmation of the sale is subject to decisions in appeal.

Vide Reply to (*c*)

1. That he the first appellant was the only applicant for the land for the grant of which there was no objection from the villagers.

2. That he and the second appellant are bajudars owning lands on the three sides of the Survey Number in question and there is no approach to it from any other place except through their hiduvali land and therefore the disposal of this land to any other person causes great inconvenience and hardship besides leading to frictions and disputes.

3. That the land is not valuable and does not contain thick growth of date trees.

4. That the respondent is a poor Adikarnataka having no means of livelihood but set up by interested powerful persons with a view to knock off the land ultimately for themselves.

5. That the sale itself is not regular as the bidder-respondent did not deposit ¼ bid amount on the date of sale and this will be elicited by a proper enquiry.

6. That the sale Notification was not served on all the bajudars and hence irregular and liable to be cancelled.

7. That the order passed by the Deputy Commissioner for the disposal of the land is opposed to principles of equity and the special circumstances of the case, unjust and prejudicial.

ಶ್ರೀ ಟಿ. ಹನುಮಯ್ಯ.—(ಬ) ಪ್ರಶ್ನೆಗೆ ಉತ್ತರವಾಗಿ ಜಮೀನಿನ ಹರಾಜನ್ನು ಖಾಯಂ ಮಾಡಲಿಲ್ಲ ಎಂದು ತಿಳಿಸಿದ್ದೀರಿ. ಹರಾಜುಮಾಡಿದ ಎಷ್ಟು ವರ್ಷದಮೇಲೆ ಖಾಯಂ ಮಾಡುವುದು?

*ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಖಾಯಂ ಮಾಡುತ್ತೇವೆ.

*ಶ್ರೀ ಟಿ. ಹನುಮಯ್ಯ.—ಅದಕ್ಕೆ ಒಂದು ಟೈಂ ಇಲ್ಲವೇ? 3 ತಿಂಗಳೇ, 6 ತಿಂಗಳೇ, ಒಂದು ವರ್ಷವೇ 5 ವರ್ಷಗಳೇ, ಹೇಗೆ?

ಅಧ್ಯಕ್ಷರು.—ಕಾನೂನು ಪ್ರಕಾರ ಎಷ್ಟು ತಿಂಗಳು ಬೇಕೋ ಅಷ್ಟು ತಿಂಗಳು ಆಗುತ್ತದೆ ಎಂದು ಹೇಳಿದ್ದಾರೆ. ಬೇರೆ ಪ್ರಶ್ನೆ ಕೇಳಿ.

ಶ್ರೀ ಟಿ. ಹನುಮಯ್ಯ.—ಅಪೀಲುದಾರರಿಗೆ ಎರಡು ಎಕರೆ ಜಮೀನು ಕೊಟ್ಟಿದ್ದೀರಿ. ಇದಕ್ಕೆ ಮೊದಲೇ ಅವರು ಆ ಜಮೀನನ್ನು ನನಗೇ ಕೊಡಿಸಬೇಕು ಎಂದು ಹೇಳಿ ಅರ್ಜಿ ಕೊಟ್ಟಿದ್ದು ನಿಜವೇ?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಜಿಕೊಟ್ಟು ರೆಕಾರ್ಡ್ ಬರ್ಡ್ ಅಪ್ ಆಗಿತ್ತು. ಆದರೆ ಜಮೀನು ಕೊಡುವುದಕ್ಕಾಗುವುದಿಲ್ಲ ಎಂದು ಅದು ವಜಾ ಆಯಿತು.

ಶ್ರೀ ಟಿ. ಹನುಮಯ್ಯ.—ವಜಾ ಮಾಡುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರ ಇಲ್ಲಿ ಇಲ್ಲ.

ಶ್ರೀ ಟಿ. ಹನುಮಯ್ಯ.—ಅಪೀಲುದಾರನಿಗೆ ಇರತಕ್ಕ ಆ ಜಮೀನಿನ ಪಕ್ಕದಲ್ಲಿರುವ ಜಮೀನು ತಾನೆ ಎರಡು ಎಕರೆ ಕೊಟ್ಟಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಟಿ. ಹನುಮಯ್ಯ.—ಅವನು ಮೊದಲು ನಿಂದಲೂ ಆ ಜಮೀನನ್ನು ತನಗೇ ಕೊಡಿಸಬೇಕೆಂದು ದರಖಾಸ್ತು ಮೂಲಕ ಕೇಳುತ್ತಾ ಇದ್ದನಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅವನು ಎರಡು ಎಕರೆ ಕೇಳಿರಲಿಲ್ಲ, 6 ಎಕರೆ ಜಮೀನು ಬೇಕು ಎಂದು ಹೇಳಿ ದರಖಾಸ್ತು ಹಾಕಿದ್ದ.

ಶ್ರೀ ಟಿ. ಹನುಮಯ್ಯ.—ತಾವು ಕೊಟ್ಟಿರುವ ಜಮೀನು ಹರಾಜು ಕ್ಯಾನ್ಸಲ್ ಮಾಡಿಕೊಟ್ಟಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಟಿ. ಹನುಮಯ್ಯ.—ಹರಾಜು ಮಾಡಿದಮೇಲೆ ಪುನಃ ಈ ರೀತಿ ಜಮೀನು ಕೊಡಬೇಕಾಗಿದ್ದರೆ ಯಾವ ತತ್ವ, ಆಧಾರದಮೇಲೆ ಕೊಟ್ಟಿರಿ?

* Indicates that the remarks or speeches have not been revised by the Member concerned.

ಶ್ರೀ ಕಡಿದಾಳ್ ಮಂಜಪ್ಪ.—ಒಂದು ತತ್ವದಮೇಲೆ ಜಮೀನು ಕೊಟ್ಟಿದೆ. ಹಿಂದೆ ಅವರ ಪರವಾಗಿ ರೆಕಾರ್ಡ್ ಬಿಲ್ಟ್‌ಅಪ್ ಆಗಿತ್ತು. ಆದರೆ ಆ ಜಮೀನು ರಿಲೀಸ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ದರ ಖಾಸ್ತು ಪಡಿಸಿ ಮಾಡಿದ್ದರು. ಪುನಃ ಅವನ ಅರ್ಜಿಯನ್ನು ಪರಿಗಣಿಸದೆ ಹರಾಜು ಮಾಡಿದ್ದರಿಂದ ಎರಡು ಎಕರೆ ಆದರೂ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ.

ಶ್ರೀ ಟಿ. ಹನುಮಯ್ಯ.—ದರಖಾಸ್ತು ಅರ್ಜಿ ತಿರಸ್ಕಾರ ಮಾಡಿರುವ ಡೆಪ್ಯುಟಿಕಮೀಷನರು, ಈ ಜಮೀನು ಆತನಿಗೆ ಸಿಕ್ಕಕೂಡದು ಎಂಬ ಉದ್ದೇಶದಿಂದ ಮಾಡಿರುವುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಈ ರೆಕಾರ್ಡ್‌ನಲ್ಲಿ ವ್ಯಕ್ತವಾಗಿಲ್ಲ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಯಾವ ಆಧಾರದಮೇಲೆ ಇದನ್ನು ಹರಾಜು ಮಾಡಲಿಕ್ಕೆ ಕಾರ್ಯಕ್ರಮ ತೆಗೆದುಕೊಂಡಿರಿ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದನೆಯದು ಜಮೀನು ರಿಲೀಸ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಈ ಅಪೀಲುದಾರನ ಅರ್ಜಿ ವಜಾಮಾಡಿದ್ದರು. ಕೆಲವುದಿನಗಳ ನಂತರ ರಿಲೀಸ್ ಮಾಡಬಹುದು ಎಂದು ಹೇಳಿ ಅಭಿಪ್ರಾಯಪಟ್ಟರು. ಆ ಅಭಿಪ್ರಾಯದ ಪ್ರಕಾರ ಹರಾಜು ಆಯಿತು.

ಶ್ರೀ ಟಿ. ಹನುಮಯ್ಯ.—ಪ್ರತಿವಾದಿಯು ಜೀವನೋಪಾಯಕ್ಕೆ ಯಾವ ಮಾರ್ಗವೂ ಇಲ್ಲದಿರುವ ಒಬ್ಬ ಬಡ ಆದಿಕರ್ಣಾಟಕ ಎಂದು ಹೇಳಿದ್ದಾರೆ. ಹಾಗಾದರೆ ಈ ಎರಡು ಎಕರೆ ಮಂಜೂರು ಮಾಡಿದ್ದೀರಲ್ಲಾ ಇವರು ಕೋಟ್ಯಾಧೀಶ್ವರರೋ ?

ಶ್ರೀ ಕಡಿದಾಳ್ ಮಂಜಪ್ಪ.—ಬಡ ಆದಿಕರ್ಣಾಟಕರು ಎಂದು ಹೇಳಿರುವುದು ನ್ಯಾಯವಾದ ಕಾರಣವಲ್ಲ.

ಶ್ರೀ ಟಿ. ಹನುಮಯ್ಯ.—ಅಷ್ಟೇಅಲ್ಲದೆ ಅವರ ಹಿಂದೆ ಪ್ರಭಾವಶಾಲಿಗಳು ಇದ್ದಾರೆ ಎಂದು ಹೇಳಿದ್ದಾರೆ. ಯಾರು, ನ್ಯಾಮಿ, ಆ ಪ್ರಭಾವಶಾಲಿಗಳು, ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಗೊತ್ತಿಲ್ಲ. ವಾಸ್ತವಿಕವಾಗಿರತಕ್ಕ ರೆಕಾರ್ಡ್‌ಮೇಲೆಯೇ ಕೇಸು ತೀರ್ಮಾನ ಆಗುವುದು.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಅಪೀಲುದಾರ ಏನು ಸ್ಟೇಟ್‌ಮೆಂಟ್ ಕೊಡುತ್ತಾನೆಯೋ ಅದೇ ನಿಜ ಎಂದು ಸರ್ಕಾರದವರು ಒಪ್ಪಿಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅವನು ಹೇಳಿದ್ದೆಲ್ಲಾ ವೇದವಾಕ್ಯ ಅಲ್ಲ. ರೆಕಾರ್ಡ್‌ನಲ್ಲಿರುವುದರಮೇಲೆ ಹೋಗುತ್ತದೆ.

Muzrai Institutions. (Representation of Harijans in Committees of Dharmadarsis).

Q.—208. **Sri M. CHIKKALINGIAH** (Malavalli—Scheduled Castes).—

Will the Government be pleased to state :—

(*a*) whether it is not a fact that constant representations have been made regarding the selection of Dharmadarsis to the Managing Committees of Major and Minor Muzrai Institutions in the State ;

(*b*) the action taken by the authorities in this direction ;

(*c*) whether it has come to their notice that in some cases where Dharmadarsis are not taken to Committees, they are not properly invited to the meetings ?

A.—**Sri Kadidal MANJAPPA** (Minister for Revenue and Public Works).—

(*a*) The question is vague and too general.

(*b*) and (*c*) Do not arise in view of answer to (*a*).

ಶ್ರೀ ಎಂ. ಚಿಕ್ಕಲಿಂಗಯ್ಯ.—ಮೇಜರ್ ಮತ್ತು ಮೈನರ್ ಮುಜರಾಯ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಮ್ಯಾನೇಜಿಂಗ್ ಕಮಿಟಿಗಳು ಇವೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಕಮಿಟಿಗಳಲ್ಲಿ ಡಿಪ್ರೆಸ್ಡ್ ಕ್ಲಾಸ್‌ನವರನ್ನು ನೇಮಕ ಮಾಡಿಕೊಳ್ಳಬೇಕು ಅಥವಾ ಸೇರಿಸಿಕೊಳ್ಳಬೇಕು ಎಂದು ಹೇಳಿಕೊಳ್ಳುತ್ತಾ ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವರನ್ನೂ ಸಹ, ಸರಿಯಾದ ಅರ್ಹತೆ ಇದ್ದವರು ಇದ್ದರೆ ಸೇರಿಸಬೇಕು ಎಂದುಹೇಳಿ ಸರ್ಕ್ಯುಲರ್ ಕಳುಹಿಸಿದ್ದೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಹೇಳಿದ್ದು ಸರಿಯಾಗಿ ಅರ್ಥವಾಗಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ತಮಗೆ ಆ ಸರ್ಕ್ಯುಲರ್‌ನ್ನೇ ಓದಿಹೇಳುತ್ತೇನೆ :—

> "Government agree that this is desirable and the Muzrai Commissioner is accordingly requested to issue suitable instructions to the Deputy Commissioners of Districts to appoint one or two Harijans whom they consider suitable at the next reconstitution of the committees of Dharmadarsis to the Muzrai Temples."

ಶ್ರೀ ಎಂ. ಚಿಕ್ಕಲಿಂಗಯ್ಯ.—ಇವುಗಳು ರೀಕಾನ್‌ಸ್ಟಿಟ್ಯೂಟ್ ಆಗಬೇಕಾದರೆ 3-4 ವರ್ಷಕ್ಕೆ ಒಂದುಸಾರಿ ಆಗುತ್ತವೆ. ರೀಕಾನ್‌ಸ್ಟಿಟ್ಯೂಟ್ ಆಗುವಾಗ ಸೇರಿಸಿಕೊಳ್ಳಬೇಕು ಎಂಬುದಿಲ್ಲ. ಈಗ ಹಾಲ ಇರತಕ್ಕ ಲಿಸ್ಟ್‌ನಲ್ಲೇ additional ಆಗಿ ನಮ್ಮವರನ್ನು ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

*ಶ್ರೀ ಕಡಿದಾಳ್ ಮಂಜಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹರಿಜನರನ್ನು ಈ ಧರ್ಮದರ್ಶಿಗಳ ಪಟ್ಟಿಯಲ್ಲಿ ಸೇರಿಸುವ ದೆಶೆಯಿಂದ ಅಸ್ಪೃಶ್ಯತಾನಿವಾರಣೆಗೆ ಸಹಾಯವಾಗುತ್ತದೆಯಲ್ಲವೆ ?